# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1700 (1907) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಸಿ.ಎನ್. ಮಂಜೇಗೌಡ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 24.03.2026 |
| ಉತ್ತರಿಸುವ ಸಚಿವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಮೈಸೂರು ಜಿಲ್ಲೆಯ ಪ್ರಮುಖ ಕೈಗಾರಿಕಾ ವಲಯಗಳಾದ ಕಡಕೊಳ, ತಾಂಡ್ಯ, ನಂಜನಗೂಡು ಮತ್ತು ಕೂರ್ಗಳ್ಳಿ ವಲಯಗಳಲ್ಲಿ ಪ್ರಸ್ತುತ ಕೆ.ಐ.ಎ.ಡಿ.ಬಿ (KIADB) ವತಿಯಿಂದ ಅಭಿವೃದ್ಧಿಪಡಿಸಲಾದ ಫ್ಲಾಟ್‌ಗಳಲ್ಲಿ ಖಾಲಿ ಇರುವ ಫ್ಲಾಟ್‌ಗಳ ಸಂಖ್ಯೆ ಎಷ್ಟು; (ವಲಯವಾರು ಮಾಹಿತಿ ನೀಡುವುದು)</td><td>ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಮೈಸೂರು ಜಿಲ್ಲೆಯ ಅಭಿವೃದ್ಧಿ ಪಡಿಸಿರುವ ಕೈಗಾರಿಕಾ ಪ್ರದೇಶಗಳಾದ ಕಡಕೊಳ, ತಾಂಡ್ಯ, ನಂಜನಗೂಡು ಮತ್ತು ಕೂರ್ಗಳ್ಳಿ ಖಾಲಿ ಇರುವ ಪ್ಲಾಟ್‌ಗಳ ವಿವರಗಳು ಈ ಕೆಳಗಿನಂತಿದೆ:
<table>
<tr><th>ಕ್ರ. ಸಂ</th><th>ಕೈಗಾರಿಕಾ ಪ್ರದೇಶ</th><th>ಖಾಲಿ ಇರುವ ನಿವೇಶನಗಳ ಸಂಖ್ಯೆ</th><th>ಷರಾ</th></tr>
<tr><td>1</td><td>ಕಡಕೊಳ</td><td>ನಿವೇಶನ ಲಭ್ಯವಿರುವುದಿಲ್ಲ.</td><td>-</td></tr>
<tr><td>2</td><td>ತಾಂಡ್ಯ 2ನೇ ಹಂತ</td><td>50</td><td>ಈ 50 ನಿವೇಶನಗಳು 34.87 ಎಕರೆ ಜಮೀನಿನಲ್ಲಿ ಬರುತ್ತಿದ್ದು, ಸದರಿ ಸರ್ಕಾರಿ ಜಮೀನಾಗಿದ್ದು, ಮಂಡಳಿಗೆ ಹಸ್ತಾಂತರವಾಗಿರುವುದಿಲ್ಲ.</td></tr>
<tr><td>3</td><td>ನಂಜನ ಗೂಡು</td><td>ನಿವೇಶನ ಲಭ್ಯವಿರುವುದಿಲ್ಲ.</td><td></td></tr>
<tr><td>4</td><td>ಕೂರ್ಗಳ್ಳಿ</td><td>ನಿವೇಶನ ಲಭ್ಯವಿರುವುದಿಲ್ಲ.</td><td></td></tr>
</table></td></tr>
<tr><td>ಆ</td><td>ಕಳೆದ ಮೂರು ವರ್ಷಗಳಲ್ಲಿ ಮೈಸೂರು ಜಿಲ್ಲೆಯಲ್ಲಿ ಎಷ್ಟು ಹೊಸ ಕೈಗಾರಿಕಾ ಘಟಕಗಳಿಗೆ ಜಾಗ ಹಂಚಿಕೆ ಮಾಡಲಾಗಿದೆ ಮತ್ತು ಇದರಿಂದ ಹರಿದು ಬಂದ ಒಟ್ಟು ಹೂಡಿಕೆಯ ಮೊತ್ತ ಎಷ್ಟು;</td><td>ಮಂಡಳಿ ವತಿಯಿಂದ ಕಳೆದ ಮೂರು ವರ್ಷಗಳಲ್ಲಿ ಮೈಸೂರು ಜಿಲ್ಲೆಯಲ್ಲಿ ವಿವಿಧ ಹೊಸ ಕೈಗಾರಿಕಾ ಪ್ರದೇಶಗಳಲ್ಲಿ ಒಟ್ಟು 111 ಘಟಕಗಳಿಗೆ 112.6 ಎಕರೆ ಜಮೀನನ್ನು ಹಂಚಿಕೆ ಮಾಡಲಾಗಿದೆ ವಿವರಗಳು ಈ ಕೆಳಕಂಡಂತಿದೆ:
<table>
<tr><th rowspan="2">ಕ್ರ. ಸಂ</th><th rowspan="2">ಕೈಗಾರಿಕಾ ಪ್ರದೇಶ</th><th colspan="2">2023-24</th><th colspan="2">2024-25</th><th colspan="2">2025 to 18-03-2026</th></tr>
<tr><th>ಘಟಕಗಳು</th><th>ವಿಸ್ತೀರ್ಣ (ಎಕರೆ)</th><th>ಘಟಕಗಳು</th><th>ವಿಸ್ತೀರ್ಣ (ಎಕರೆ)</th><th>ಘಟಕಗಳು</th><th>ವಿಸ್ತೀರ್ಣ (ಎಕರೆ)</th></tr>
<tr><td>1</td><td>Koorgally</td><td>15</td><td>8.55</td><td>1</td><td>0.19</td><td>8</td><td>2.11</td></tr>
<tr><td>2</td><td>Kadakola</td><td>0</td><td>0</td><td>2</td><td>0.60</td><td>1</td><td>1</td></tr>
<tr><td>3</td><td>Adakanahally</td><td>2</td><td>8.16</td><td>4</td><td>14.41</td><td>0</td><td>0</td></tr>
<tr><td>4</td><td>Immavu</td><td>6</td><td>6.98</td><td>3</td><td>12.11</td><td>1</td><td>0.99</td></tr>
<tr><td>5</td><td>Thandya 2nd Phase, Women's Park-Phase-1,</td><td>0</td><td>0</td><td>1</td><td>0.25</td><td>0</td><td>0</td></tr>
<tr><td>6</td><td>Thandya 2nd Phase, Women's Park-Phase-2,</td><td>0</td><td>0</td><td>1</td><td>0.43</td><td>0</td><td>0</td></tr>
</table></td></tr>
</table>

| | | | | | | |
|---|---|---|---|---|---|---|
| 7 | Thandya 2nd Phase | 0 | 0 | 27 | 27.89 | 28 | 18.04 |
| 8 | Thandya 2nd Stage, 1st Phase | 0 | 0 | 7 | 6.10 | 4 | 4.79 |

| | | |
|---|---|---|
| ಇ | ಜಾಗ ಹಂಚಿಕೆಯಾಗಿ 2 ವರ್ಷ ಕಳೆದರೂ ಉತ್ಪಾದನೆ ಆರಂಭಿಸದ ಘಟಕಗಳ ಸಂಖ್ಯೆ ಎಷ್ಟು; ಅಂತಹ ಉದ್ದಿಮೆದಾರರ ವಿರುದ್ಧ ಜಾಗದ ಹಂಚಿಕೆ ರದ್ದುಗೊಳಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ; | ಮಂಡಳಿ ವತಿಯಿಂದ ಕೈಗಾರಿಕಾ ಪ್ರದೇಶಗಳಲ್ಲಿ ನಿವೇಶನ ಹಂಚಿಕೆ ಪಡೆದ ಉದ್ದಿಮೆದಾರರು ಸ್ವಾಧಿನ ಪತ್ರ ಪಡೆದು, ಗುತ್ತಿಗೆ ಮತ್ತು ಮಾರಾಟ ಕರಾರು ಪತ್ರ ನೆರವೇರಿಸಿದ ನಂತರ ಯೋಜನೆ ಅನಷ್ಠಾನಗೊಳಿಸಲು ಮೂರು ವರ್ಷ ಕಾಲಾವಕಾಶವಿರುತ್ತದೆ. ಈ ಹಿನ್ನೆಲೆಯಲ್ಲಿ, ಕಳೆದ 2 ವರ್ಷಗಳ ಅವಧಿಯಲ್ಲಿ ಉದ್ದಿಮೆದಾರರಿಗೆ ಅನುಮೋದನೆ ಮಾಡಲಾದ ಯೋಜನೆಗಳು ಅನುಷ್ಠಾನದ ವಿವಿಧ ಹಂತಗಳಲ್ಲಿದ್ದು, ಇನ್ನೂ ಕಾಲಾವಕಾಶವಿರುತ್ತದೆ. |
| ಈ | ಮೈಸೂರು–ಬೆಂಗಳೂರು ದಶಪಥ ರಸ್ತೆಯ ಹಿನ್ನಲೆಯಲ್ಲಿ, ಮೈಸೂರು ಖಾಲಿ ಪ್ಲಾಟ್ ಗಳಲ್ಲಿ ಕೈಗಾರಿಕೆಗಳನ್ನು ಶೀಘ್ರವಾಗಿ ಸ್ಥಾಪಿಸಲು ಸರ್ಕಾರ ಯಾವುದಾದರು ವಿಶೇಷ "ಇನ್ಸೆಂಟಿವ್ ಪ್ಯಾಕೇಜ್" (Incentive Package) ಘೋಷಿಸಿದೆಯೇ; | ಇಲ್ಲ. |
| ಉ | ಮೈಸೂರು ಜಿಲ್ಲೆಯ ಸ್ಥಳೀಯ ಯುವಕರಿಗೆ ಮತ್ತು ತಾಂತ್ರಿಕ ಪದವೀಧರರಿಗೆ ಇಲ್ಲಿನ ಕೈಗಾರಿಕೆಗಳಲ್ಲಿ ಕನಿಷ್ಠ ಶೇ.80 ರಷ್ಟು ಉದ್ಯೋಗ ನೀಡುವ ಷರತ್ತನ್ನು ಕಡ್ಡಾಯವಾಗಿ ಜಾರಿಗೊಳಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? | ನೂತನ ಕೈಗಾರಿಕಾ ನೀತಿ 2025-30 ರನ್ವಯ ಕೈಗಾರಿಕೆಗಳಲ್ಲಿ ಉದ್ಯೋಗ ಸೃಷ್ಟಿಗೆ ಈ ಕೆಳಗಿನಂತೆ ಮಾನದಂಡಗಳನ್ನು ವಿಧಿಸಿ, ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ಕೈಗಾರಿಕೆಗಳಿಗೆ ನೀಡಲಾಗುತ್ತಿದೆ:<br><br>ಎಲ್ಲಾ ಹೊಸ ಕೈಗಾರಿಕಾ ಹೂಡಿಕೆ ಯೋಜನೆಗಳು ಸಾಧ್ಯವಾದಷ್ಟು ಅತಿ ಹೆಚ್ಚು ನೇರ ಉದ್ಯೋಗಾವಕಾಶಗಳನ್ನು ಸೃಜಿಸಬೇಕು. ಈ ಕೈಗಾರಿಕೆಗಳಲ್ಲಿ ಒಟ್ಟು ಕನಿಷ್ಠ 70% (ಒಟ್ಟು ಆಧರಿಸಿ) ಉದ್ಯೋಗಾವಕಾಶ ಕನ್ನಡಿಗರಿಗೆ ಇರಬೇಕು ಹಾಗೂ ಗ್ರೂಪ್-ಡಿ ಉದ್ಯೋಗಗಳು 100% ಕನ್ನಡಿಗರಿಗೆ ನೀಡಬೇಕು. |

**ಸಿಐ 213 ಐಎಪಿ 2026**

**(ಎಂ.ಬಿ. ಪಾಟೀಲ)**

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು